ಸುಮಶ್ರೀಸಂಸ್ಕಾರಮಾಲಿಕೆ - **001**

# ಬಾಲಸಂಸ್ಕಾರತರಂಗಿಣೀ

SUMASHRI THE SANSKRIT GURU

SMS

ŚRUTAM ME GOPĀYA

ಸುಮಶ್ರೀ ಸಂಸ್ಕೃತ ಗುರು

ಪುಸ್ತಕದ ಹೆಸರು – ಬಾಲಸಂಸ್ಕಾರತರಂಗಿಣೀ

ಎಲ್ಲಾ ಹಕ್ಕುಗಳನ್ನು "ಸುಮಶ್ರೀ ಸಂಸ್ಕೃತ ಗುರು" ಸಂಸ್ಥೆಯು ಹೊಂದಿರುತ್ತದೆ.

ಪ್ರಕಾಶಕರು – ಸುಮಶ್ರೀ ಸಂಸ್ಕೃತ ಗುರು

ಮುದ್ರಣ – ೨೪/೦೫/೨೦೨೧

ಪುಟಗಳು – ೧೨

ಮೌಲ್ಯ – ೫೦/-

ಪ್ರಕಾಶನೆ ಮತ್ತು ವಿತರಣೆ - ಸುಮಶ್ರೀ ಸಂಸ್ಕೃತ ಗುರು

ಸಂಪರ್ಕಸೂಚಿ -

www.sumashri.com

sumashri.sms@gmail.com

+919008543122

Sumashri SMS

sumashri.com

ಓಂ

# ಪ್ರಾರ್ಥನಾ ಶ್ಲೋಕಗಳು

## ಗಣಪತಿಪ್ರಾರ್ಥನಾ

ವಾಗೀಶಾದ್ಯಾಃ ಸುಮನಸಃ ಸರ್ವಾರ್ಥಾನಾಮುಪಕ್ರಮೇ|

ಯನ್ನತ್ವಾ ಕೃತಕೃತ್ಯಾಃ ಸ್ಯುಃ ತಂ ನಮಾಮಿ ಗಜಾನನಮ್||

## ಗುರುವಂದನಾ

ಗುರುರ್ಬ್ರಹ್ಮಾ ಗುರುರ್ವಿಷ್ಣುಃ ಗುರುರ್ದೇವೋ ಮಹೇಶ್ವರಃ|

ಗುರುಃ ಸಾಕ್ಷಾತ್ ಪರಂ ಬ್ರಹ್ಮ ತಸ್ಮೈ ಶ್ರೀಗುರವೇ ನಮಃ||

## ಸರಸ್ವತೀನಮಸ್ಕಾರಃ

ಸರಸ್ವತಿ ನಮಸ್ತುಭ್ಯಂ ವರದೇ ಕಾಮರೂಪಿಣಿ|

ವಿದ್ಯಾರಂಭಂ ಕರಿಷ್ಯಾಮಿ ಸಿದ್ಧಿರ್ಭವತು ಮೇ ಸದಾ||

## ದಕ್ಷಿಣಾಮೂರ್ತಿಪ್ರಾರ್ಥನಾ

ಗುರವೇ ಸರ್ವಲೋಕಾನಾಂ ಭಿಷಜೇ ಭವರೋಗಿಣಾಮ್|

ನಿಧಯೇ ಸರ್ವವಿದ್ಯಾನಾಂ ದಕ್ಷಿಣಾಮೂರ್ತಯೇ ನಮಃ||

sumashri.com

# ಸಂವತ್ಸರ ಪರಿಚಯ

ಪ್ರಭವೋ ವಿಭವಃ ಶುಕ್ಲಃ ಪ್ರಮೋದಶ್ಚ ಪ್ರಜಾಪತಿಃ|

ಅಂಗಿರಾಃ ಶ್ರೀಮುಖೋ ಭಾವೋ ಯುವಾ ಧಾತಾ ತಥೈವ ಚ||೧||

ಈಶ್ವರೋ ಬಹುಧಾನ್ಯಶ್ಚ ಪ್ರಮಾಥೀ ವಿಕ್ರಮೋ ವೃಷಃ|

ಚಿತ್ರಭಾನುಃ ಸ್ವಭಾನುಶ್ಚ ತಾರಣಃ ಪಾರ್ಥಿವೋ ವ್ಯಯಃ||೨||

ಸರ್ವಜಿತ್ ಸರ್ವಧಾರೀ ಚ ವಿರೋಧೀ ವಿಕೃತಿಃ ಖರಃ|

ನಂದನೋ ವಿಜಯಶ್ಚೈವ ಜಯೋ ಮನ್ಮಥದುರ್ಮುಖೌ||೩||

ಹೇವಿಲಂಬೀ ವಿಲಂಬೀ ಚ ವಿಕಾರೀ ಶಾರ್ವರೀ ಪ್ಲವಃ|

ಶುಭಕೃತ್ ಶೋಭಕೃತ್ ಕ್ರೋಧೀ ವಿಶ್ವಾವಸುಪರಾಭವೌ||೪||

ಪ್ಲವಂಗಃ ಕೀಲಕಸ್ಸೌಮ್ಯಃ ಸಾಧಾರಣವಿರೋಧಿಕೃತ್|

ಪರಿಧಾವೀ ಪ್ರಮಾದೀ ಚ ಆನಂದೋ ರಾಕ್ಷಸೋ ನಲಃ||೫||

ಪಿಂಗಲಃ ಕಾಲಯುಕ್ತಶ್ಚ ಸಿದ್ಧಾರ್ಥೀ ರೌದ್ರದುರ್ಮತೀ|

ದುಂದುಭೀ ರುಧಿರೋದ್ಗಾರೀ ರಕ್ತಾಕ್ಷೀ ಕ್ರೋಧನಃ ಕ್ಷಯಃ||೬||

1. ಪ್ರಭವಃ
2. ವಿಭವಃ
3. ಶುಕ್ಲಃ
4. ಪ್ರಮೋದಃ
5. ಪ್ರಜಾಪತಿಃ
6. ಅಂಗಿರಸ್
7. ಶ್ರೀಮುಖಃ
8. ಭಾವಃ
9. ಯುವಾ
10. ಧಾತಾ
11. ಈಶ್ವರಃ
12. ಬಹುಧಾನ್ಯಃ
13. ಪ್ರಮಾಥೀ
14. ವಿಕ್ರಮಃ
15. ವೃಷಃ
16. ಚಿತ್ರಭಾನುಃ
17. ಸ್ವಭಾನುಃ
18. ತಾರಣಃ
19. ಪಾರ್ಥಿವಃ
20. ವ್ಯಯಃ
21. ಸರ್ವಜಿತ್
22. ಸರ್ವಧಾರೀ
23. ವಿರೋಧೀ
24. ವಿಕೃತಿಃ
25. ಖರಃ
26. ನಂದನಃ

sumashri.com

27. ವಿಜಯಃ
28. ಜಯಃ
29. ಮನ್ಮಥಃ
30. ದುರ್ಮುಖಿಃ
31. ಹೇವಿಲಂಬೀ
32. ವಿಲಂಬೀ
33. ವಿಕಾರೀ
34. ಶಾರ್ವರೀ
35. ಪ್ಲವಃ
36. ಶುಭಕೃತ್
37. ಶೋಭಕೃತ್
38. ಕ್ರೋಧೀ
39. ವಿಶ್ವಾವಸುಃ
40. ಪರಾಭವಃ
41. ಪ್ಲವಂಗಃ
42. ಕೀಲಕಃ
43. ಸೌಮ್ಯಃ
44. ಸಾಧಾರಣಃ
45. ವಿರೋಧಿಕೃತ್
46. ಪರಿಧಾವೀ
47. ಪ್ರಮಾದೀ
48. ಆನಂದಃ
49. ರಾಕ್ಷಸಃ
50. ನಲಃ
51. ಪಿಂಗಲಃ
52. ಕಾಲಯುಕ್ತಃ
53. ಸಿದ್ಧಾರ್ಥೀ
54. ರೌದ್ರಃ
55. ದುರ್ಮತಿಃ
56. ದುಂದುಭಿಃ
57. ರುಧಿರೋದ್ಗಾರೀ
58. ರಕ್ತಾಕ್ಷೀ
59. ಕ್ರೋಧನಃ
60. ಕ್ಷಯಃ

ಎಂಬುದಾಗಿ ಅರವತ್ತು ಸಂವತ್ಸರಗಳನ್ನು ತಿಳಿಯುವುದು.

## ಅಯನ ಪರಿಚಯ

ಭಾನೋರ್ಮಕರಸಂಕ್ರಾಂತೇಃ ಷಣ್ಮಾಸಾ ಉತ್ತರಾಯಣಮ್|

ಕರ್ಕಾದೇಸ್ತು ತಥೈವ ಸ್ಯಾತ್ ಷಣ್ಮಾಸಾ ದಕ್ಷಿಣಾಯನಮ್ ||

1. ಉತ್ತರಾಯಣಮ್
2. ದಕ್ಷಿಣಾಯನಮ್

ಸೂರ್ಯನು ಮಕರರಾಶಿಯಿಂದ ಮಿಥುನರಾಶಿಯವರೆಗೆ ಸಂಚರಿಸುವ ಕಾಲಕ್ಕೆ ಉತ್ತರಾಯಣವೆಂದೂ, ಕರ್ಕರಾಶಿಯಿಂದ ಧನೂರಾಶಿಯವರೆಗೆ ಸಂಚರಿಸುವ ಕಾಲಕ್ಕೆ ದಕ್ಷಿಣಾಯನವೆಂದೂ ಕರೆಯಲಾಗುತ್ತದೆ. ಈ ಪ್ರಕಾರ ಒಂದು ಸಂವತ್ಸರಕ್ಕೆ ಎರಡು ಅಯನಗಳನ್ನು ತಿಳಿಯುವುದು.

sumashri.com

sumashri.com

## ಋತು ಪರಿಚಯ

ವಸಂತಗ್ರೀಷ್ಮಕೌ ಚೈವ ವರ್ಷರ್ತುಶರದೌ ತಥಾ|

ಹೇಮಂತಶಿಶಿರೌ ಚೈವ ಷಡೇತೇ ಋತವಃ ಸ್ಮೃತಾಃ ||

ಒಂದು ಸಂವತ್ಸರಕ್ಕೆ ಆರು ಋತುಗಳು. ವಸಂತ-ಋತು, ಗ್ರೀಷ್ಮ-ಋತು, ವರ್ಷ-ಋತು, ಶರದೃತು, ಹೇಮಂತ-ಋತು, ಶಿಶಿರ-ಋತು. ಈ ಋತುಗಳನ್ನು ಎರಡೆರಡು ತಿಂಗಳುಗಳಿಗೆ ಒಂದೊಂದರಂತೆ ಹನ್ನೆರಡು ತಿಂಗಳುಗಳಿಗೆ ಆರು ಋತುಗಳನ್ನು ತಿಳಿಯುವುದು.

## ಮಾಸ ಪರಿಚಯ

ಚೈತ್ರವೈಶಾಖಜ್ಯೇಷ್ಠಾಖ್ಯಾಃ ಆಷಾಢಃ ಶ್ರಾವಣಸ್ತಥಾ|

ಭಾದ್ರಶ್ಚಾಶ್ವಯುಜಶ್ಚೈವ ಕಾರ್ತಿಕೋ ಮಾರ್ಗಶೀರ್ಷಕಃ||

ಪುಷ್ಯಮಾಸೋ ಮಾಘಮಾಸಸ್ತಥಾ ಫಾಲ್ಗುನನಾಮಕಃ|

ಏತೇ ದ್ವಾದಶಮಾಸಾಃ ಸ್ಯುಃ ಚಾಂದ್ರಮಾನೇ ಪ್ರಕೀರ್ತಿತಾಃ||

1. ಚೈತ್ರಃ
2. ವೈಶಾಖಃ
3. ಜ್ಯೇಷ್ಠಃ
4. ಆಷಾಢಃ
5. ಶ್ರಾವಣಃ
6. ಭಾದ್ರಪದಃ
7. ಆಶ್ವಯುಜಃ
8. ಕಾರ್ತಿಕಃ
9. ಮಾರ್ಗಶೀರ್ಷಃ
10. ಪುಷ್ಯಃ
11. ಮಾಘಃ
12. ಫಾಲ್ಗುಣಃ

sumashri.com

## ಪಕ್ಷ ಪರಿಚಯ

ದ್ವಾವೇವ ಲೋಕೇ ವಿಖ್ಯಾತೌ ಶುಕ್ಲಕೃಷ್ಣೇತಿ ಪಕ್ಷಕೌ|

ಪ್ರತಿಪತ್-ಪೌರ್ಣಮಾಸ್ಯಂತಂ ಶುಕ್ಲಪಕ್ಷ ಇತಿ ಸ್ಮೃತಃ||

ಪ್ರತಿಪತ್-ದರ್ಶಮಾಸ್ಯಂತಂ ಕೃಷ್ಣಪಕ್ಷ ಇತಿ ಸ್ಮೃತಃ|

ಪ್ರತಿಪತ್ ತಿಥಿಯಿಂದ ಪೂರ್ಣಿಮೆಯವರೆಗೆ ಹದಿನೈದು ದಿನಗಳ ಕಾಲವನ್ನು ಶುಕ್ಲಪಕ್ಷವೆಂದು ಮತ್ತು ಪೂರ್ಣಿಮೆಯ ನಂತರದ ಪ್ರತಿಪತ್ತಿನಿಂದ ಅಮಾವಾಸ್ಯೆಯವರೆಗಿನ ಹದಿನೈದು ದಿನಗಳ ಕಾಲವನ್ನು ಕೃಷ್ಣಪಕ್ಷವೆಂದು ತಿಳಿಯಬೇಕು.

## ತಿಥಿ ಪರಿಚಯ

ಪ್ರತಿಪಚ್ಚ ದ್ವಿತೀಯಾ ಚ ತೃತೀಯಾ ಚ ಚತುರ್ಥಿಕಾ|

ಪಂಚಮೀ ಚ ತಥಾ ಷಷ್ಠೀ ಸಪ್ತಮೀ ಚಾಷ್ಟಮೀ ತಥಾ||

ನವಮೀ ದಶಮೀ ಚೈಕಾದಶೀ ಚ ದ್ವಾದಶೀ ತಥಾ|

ತ್ರಯೋದಶೀಚತುರ್ದಶ್ಯೌ ಪೂರ್ಣಿಮಾ ದರ್ಶನಾಮಿಕಾ||

1. ಪ್ರತಿಪತ್ (ಪಾಡ್ಯ)
2. ದ್ವಿತೀಯಾ (ಬಿದಿಗೆ)
3. ತೃತೀಯಾ (ತದಿಗೆ)
4. ಚತುರ್ಥೀ (ಚೌತಿ)
5. ಪಂಚಮೀ
6. ಷಷ್ಠೀ
7. ಸಪ್ತಮೀ
8. ಅಷ್ಟಮೀ
9. ನವಮೀ
10. ದಶಮೀ
11. ಏಕಾದಶೀ
12. ದ್ವಾದಶೀ
13. ತ್ರಯೋದಶೀ
14. ಚತುರ್ದಶೀ
15. ಪೂರ್ಣಿಮಾ (ಹುಣ್ಣಿಮೆ) ಅಥವಾ ಅಮಾವಾಸ್ಯಾ.

# ನಕ್ಷತ್ರ ಪರಿಚಯ

ಅಶ್ವಿನೀ ಭರಣೀ ಚೈವ ಕೃತ್ತಿಕಾ ರೋಹಿಣೀ ಮೃಗಃ|

ಆರ್ದ್ರಾಪುನರ್ವಸೂ ಪುಷ್ಯಸ್ತಥಾऽऽಶ್ಲೇಷಾ ಮಘಾ ತಥಾ||

ಪೂರ್ವಾಫಲ್ಗುನಿಕಾ ತಸ್ಮಾದುತ್ತರಾಫಲ್ಗುನೀ ತಥಾ|

ಹಸ್ತಶ್ಚಿತ್ರಾ ತಥಾ ಸ್ವಾತೀ ವಿಶಾಖಾ ತದನಂತರಮ್||

ಅನುರಾಧಾ ತತೋ ಜ್ಯೇಷ್ಠಾ ತಥಾ ಮೂಲಂ ನಿಗದ್ಯತೇ|

ಪೂರ್ವಾಷಾಢೋತ್ತರಾಷಾಢೇ ಅಭಿಜಿಚ್ಛ್ರವಣಂ ತಥಾ||

ಧನಿಷ್ಠಾ ಶತತಾರಾಖ್ಯಾ ಪೂರ್ವಾಭಾದ್ರಪದಾ ತಥಾ|

ಉತ್ತರಾಭಾದ್ರಪದಾ ಚ ಸ್ಯೂ ರೇವತ್ಯೇತಾನಿ ಭಾನಿ ಚ||

1. ಅಶ್ವಿನೀ
2. ಭರಣೀ
3. ಕೃತ್ತಿಕಾ
4. ರೋಹಿಣೀ
5. ಮೃಗಶಿರಃ
6. ಆರ್ದ್ರಾ
7. ಪುನರ್ವಸುಃ
8. ಪುಷ್ಯಃ
9. ಆಶ್ಲೇಷಾ
10. ಮಘಾ
11. ಪೂರ್ವಫಲ್ಗುನೀ(ಹುಬ್ಬಾ)
12. ಉತ್ತರಫಲ್ಗುನೀ(ಉತ್ತರಾ)
13. ಹಸ್ತಾ
14. ಚಿತ್ರಾ(ಚಿತ್ತಾ)
15. ಸ್ವಾತೀ
16. ವಿಶಾಖಾ
17. ಅನೂರಾಧಾ
18. ಜ್ಯೇಷ್ಠಾ
19. ಮೂಲಾ
20. ಪೂರ್ವಾಷಾಢಾ
21. ಉತ್ತರಾಷಾಢಾ
22. ಶ್ರವಣಃ
23. ಧನಿಷ್ಠಾ
24. ಶತಭಿಷಾ
25. ಪೂರ್ವಾಭಾದ್ರಾ
26. ಉತ್ತರಾಭಾದ್ರಾ
27. ರೇವತೀ

(ಅಭಿಜಿತ್ ಎನ್ನುವ ಹೆಸರಿನ ನಕ್ಷತ್ರವನ್ನೂ ಸಹ ಜ್ಯೋತಿಶ್ಶಾಸ್ತ್ರದಲ್ಲಿ ಹೇಳಲಾಗಿದೆ.)

sumashri.com

# ರಾಶಿ ಪರಿಚಯ

ಮೇಷೋ ವೃಷಶ್ಚ ಮಿಥುನಂ ಕರ್ಕಃ ಸಿಂಹಶ್ಚ ಕನ್ಯಕಾ|

ತುಲಾ ಚ ವೃಶ್ಚಿಕಶ್ಚೈವ ಧನುಶ್ಚ ಮಕರಸ್ತಥಾ|

ಕುಂಭಶ್ಚೈವ ತಥಾ ಮೀನಶ್ಚೈತೇ ದ್ವಾದಶರಾಶಯಃ||

1. ಮೇಷಃ
2. ವೃಷಭಃ
3. ಮಿಥುನಃ
4. ಕರ್ಕಾಟಕಃ
5. ಸಿಂಹಃ
6. ಕನ್ಯಾ
7. ತುಲಾ
8. ವೃಶ್ಚಿಕಃ
9. ಧನುಃ
10. ಮಕರಃ
11. ಕುಂಭಃ
12. ಮೀನಃ

# ಯೋಗಪರಿಚಯ

ವಿಷ್ಕಂಭಃ ಪ್ರೀತಿರಾಯುಷ್ಮಾನ್ ಸೌಭಾಗ್ಯಃ ಶೋಭನಸ್ತಥಾ|

ಅತಿಗಂಡಃ ಸುಕರ್ಮಾ ಚ ಧೃತಿಃ ಶೂಲಸ್ತಥೈವ ಚ ||

ಗಂಡೋ ವೃದ್ಧಿರ್ಧ್ರುವಶ್ಚೈವ ವ್ಯಾಘಾತೋ ಹರ್ಷಣಸ್ತಥಾ|

ವಜ್ರಃ ಸಿದ್ಧಿರ್ವ್ಯತೀಪಾತಃ ವರೀಯಾನ್ ಪರಿಘಃ ಶಿವಃ||

ಸಿದ್ಧಃ ಸಾಧ್ಯಃ ಶುಭಃ ಶುಕ್ಲಃ ಬ್ರಹ್ಮ ಚೈಂದ್ರಶ್ಚ ವೈಧೃತಿಃ |

ಏತೇ ಯೋಗಾಸ್ಸುವಿಜ್ಞೇಯಾಃ ಸಪ್ತವಿಂಶತಿಸಂಖ್ಯಕಾಃ ||

1. ವಿಷ್ಕಂಭಃ
2. ಪ್ರೀತಿಃ
3. ಆಯುಷ್ಮಾನ್
4. ಸೌಭಾಗ್ಯಃ
5. ಶೋಭನಃ
6. ಅತಿಗಂಡಃ
7. ಸುಕರ್ಮಾ
8. ಧೃತಿಃ
9. ಶೂಲಃ
10. ಗಂಡಃ
11. ವೃದ್ಧಿಃ
12. ಧ್ರುವಃ
13. ವ್ಯಾಘಾತಃ
14. ಹರ್ಷಣಃ
15. ವಜ್ರಃ

sumashri.com

16. ಸಿದ್ಧಿಃ
17. ವ್ಯತೀಪಾತಃ
18. ವರೀಯಾನ್
19. ಪರಿಘಃ
20. ಶಿವಃ
21. ಸಿದ್ಧಃ
22. ಸಾಧ್ಯಃ
23. ಶುಭಃ
24. ಶುಕ್ಲಃ
25. ಬ್ರಹ್ಮ
26. ಐಂದ್ರಃ
27. ವೈಧೃತಿಃ

## ಕರಣ ಪರಿಚಯಃ

ಬವಶ್ಚ ಬಾಲವಃ  ಕೌಲಃ ತೈತಿಲೋ ಗರಜೋ ವಣಿಕ್|

ಭದ್ರಂ ಚ ಶಕುನಿಶ್ಚೈವ ಚತುಷ್ಪಾನ್ನಾಗವಾಂಸ್ತಥಾ|

ಕಿಂಸ್ತುಘ್ನಮಿತಿ ಚೈತಾನಿ ಪ್ರೋಕ್ತಾನಿ ಕರಣಾನಿ ವೈ||

1. ಬವಃ
2. ಬಾಲವಃ
3. ಕೌಲವಃ
4. ತೈತಿಲಃ
5. ಗರಜಃ
6. ವಣಿಕ್
7. ಭದ್ರಂ
8. ಶಕುನಿಃ
9. ಚತುಷ್ಪಾತ್
10. ನಾಗವಾನ್
11. ಕಿಂಸ್ತುಘ್ನಮ್

## ವಾರ ಪರಿಚಯ

ಭಾನುಶ್ಚ ಸೋಮವಾರಶ್ಚ ಮಂಗಲೋ ಬುಧಸಂಜ್ಞಕಃ|

ಬೃಹಸ್ಪತಿಃ ಶುಕ್ರಶನೀ ಸಪ್ತ ವಾರಾಃ ಪ್ರಕೀರ್ತಿತಾಃ||

1. ಭಾನುವಾರಃ
2. ಸೋಮವಾರಃ
3. ಮಂಗಲವಾರಃ
4. ಬುಧವಾರಃ
5. ಗುರುವಾರಃ
6. ಶುಕ್ರವಾರಃ
7. ಶನಿವಾರಃ

sumashri.com

# ಶಿಷ್ಟಾಚಾರ

| | | |
|---|---|---|
| ಹರಿಃ ಓಮ್ | ಶುಭಸಾಯಮ್ | ಧನ್ಯವಾದಃ |
| ಸುಪ್ರಭಾತಮ್ | ನಮಸ್ಕಾರಃ / ನಮಸ್ತೇ | ಸ್ವಾಗತಮ್ |
| ಶುಭಮಧ್ಯಾಹ್ನಮ್ | ಶುಭರಾತ್ರಿಃ | |

# ನೀತಿಕಥೆಗಳು

## ಅತಿ ಆಸೆ ಗತಿಗೇಡು

ಚಿಕ್ಕದಾದ ಚಂದಾಪುರ ಎಂಬ ಹಳ್ಳಿಯಲ್ಲಿ ಪಂಡಿತರ ಪರಿವಾರವೊಂದು ವಾಸಿಸುತ್ತಿತ್ತು. ಚಿಕ್ಕ ಕುಟುಂಬ ಅತ್ಯಂತ ಸುಖವಾಗಿತ್ತು. ಪಂಡಿತರನ್ನು ಇಡೀ ಹಳ್ಳಿಯ ಜನರು ಗೌರವಿಸುತ್ತಿದರು. ಪಂಡಿತರು ಬೆಳಿಗ್ಗೆ ಏಳುತ್ತಲೇ ತಮ್ಮ ನಿತ್ಯಕರ್ಮಗಳನ್ನು ಮುಗಿಸಿ, ಸ್ನಾನ ಮಾಡಿ ದೇವರ ಪೂಜೆಯನ್ನು ಮಾಡುತ್ತಿದ್ದರು. ಅವರ ಮನೆಯಲ್ಲಿ ಚಿಕ್ಕದಾದ ಒಂದು ದೇವರ ಮನೆಯಿತ್ತು. ಅವರು ಬಾರಿಸುವ ಗಂಟೆಯ ಸದ್ದು ಕೇಳಿ ಇಡೀ ಹಳ್ಳಿಯ ಜನರು ಎಚ್ಚರಗೊಳ್ಳುತ್ತಿದ್ದರು. ಅವರು ಬಾರಿಸುವ ಗಂಟೆಯ ಸದ್ದಿನಿಂದಲೇ ಈಗ ಬೆಳಕು ಹರಿದಿದೆ ಎಂದು ಎಲ್ಲರಿಗೂ ಗೊತ್ತಾಗುತ್ತಿತ್ತು. ಬೆಳಗಿನ ಸಮಯದಲ್ಲೇ ಭಕ್ತರು ದೇವರಿಗೆ ನಮಸ್ಕರಿಸಲು ಬರುತ್ತಿದ್ದರು ಮತ್ತು ತಮ್ಮ ಜೊತೆಯಲ್ಲಿ ಸ್ವಲ್ಪ ಹೂವು, ಹಣ್ಣು, ಹಿಟ್ಟು, ಹಾಲು, ತುಪ್ಪ ಮುಂತಾದವುಗಳನ್ನು ತಂದು ಪಂಡಿತರಿಗೆ ಒಪ್ಪಿಸುತ್ತಿದ್ದರು. ಇವೆಲ್ಲವನ್ನೂ ಇದೇ ರೀತಿ ಅವರ ಜೀವನ ಸುಖದಿಂದ ಸಾಗುತ್ತಿತ್ತು. ಆದರೆ ಒಂದು ದಿನ ಪಂಡಿತರ ದೇವರ ಮನೆಯ ಗಂಟೆ ಬಾರಿಸುವ ಸದ್ದಾಗಲೀ, ಶಂಖ ಊದುವ ಶಬ್ದವಾಗಲೀ ಕೇಳಿಸಲಿಲ್ಲ. ಇದರಿಂದ ಎಲ್ಲಾ ಹಳ್ಳಿಯ ಜನಗಳಿಗೆ ಆಶ್ಚರ್ಯವಾಯಿತು. ಆಗ ಪಂಡಿತರ ಹೆಂಡತಿ ಮತ್ತು ಮಕ್ಕಳು ದೊಡ್ಡ ದನಿಯಲ್ಲಿ ಅಳುವ ಸದ್ದು ಕೇಳಿತು. ಎಲ್ಲಾ ಹಳ್ಳಿಯ ಜನರು ತಮ್ಮ ಮನೆಗಳಿಂದ ಹೊರಬಿದ್ದು, ಪಂಡಿತರ ಮನೆಯ ಕಡೆ ಓಡತೊಡಗಿದರು. ಪಂಡಿತರ ಮನೆಯಲ್ಲಿ ಭಯಂಕರ ದೃಶ್ಯವನ್ನು ಕಂಡು ಎಲ್ಲರ ಹೃದಯ ಕಂಪಿಸಿತು. ಏಕೆಂದರೆ ಪಂಡಿತರು ಪಡಸಾಲೆಯಲ್ಲಿ ಕಣ್ಣುಗಳನ್ನು ಅಗಲವಾಗಿ ತೆರೆದುಕೊಂಡು ನಿರ್ಜೀವವಾಗಿ ಬಿದ್ದಿದ್ದರು. ಪಂಡಿತರ ಪತ್ನಿ ವಿಧವೆಯಾದಳು, ಮಕ್ಕಳು ಅನಾಥರಾದರು, ಪಂಡಿತರ ಪತ್ನಿ ಶವವನ್ನು ತಬ್ಬಿಕೊಂಡು “ಏನೂಂದ್ರೆ, ಹೀಗೆ ನಮ್ಮನ್ನು ಅನಾಥರಾಗಿ ಬಿಟ್ಟು ಹೋದಿರಲ್ಲಾ, ಈಗ ನಮ್ಮ ಗತಿ ಏನು?” ಎಂದು ನುಡಿದಳು. ನಂತರ ಅವಳ ಗೋಳು, ಮತ್ತಷ್ಟು ಜೋರಾಯಿತು. ಆಕೆಯ ಕಣ್ಣೀರನ್ನು

sumashri.com

ಕಂಡು ಎಲ್ಲ ಜನ ಒಟ್ಟಿಗೆ “ನೀನೇನೂ ಚಿಂತೆ ಮಾಡಬೇಡಮ್ಮ, ಪಂಡಿತರು ಹೋದರೆ ಏನಾಯಿತು, ನಾವೆಲ್ಲಾ ಇಲ್ಲವೇ? ನಾವು ಪಂಡಿತರ ಶವದ ಮೇಲೆ ಆಣೆ ಮಾಡಿ ಹೇಳುತ್ತೇವೆ. ನಿಮ್ಮನ್ನು ಸುಖವಾಗಿ ಸಾಕುವ ಜವಾಬ್ದಾರಿ ನಮ್ಮೆಲ್ಲರದು. ಇಂದಿನಿಂದ ಈ ಮಕ್ಕಳು ನಮ್ಮ ಮಕ್ಕಳು. ನಾವೇ ಇವರನ್ನು ನೋಡಿಕೊಳ್ಳುತ್ತೇವೆ” ಎಂದು ನುಡಿದರು. ಹಳ್ಳಿಯ ಜನರ ಮಾತುಗಳನ್ನು ಕೇಳಿ, ಪಂಡಿತರ ಪತ್ನಿಗೆ ಸ್ವಲ್ಪ ಸಮಾಧಾನವಾಯಿತು. ಆಕೆಯ ಅಳು ನಿಂತಿತು.

ಆ ಪಂಡಿತ ಒಂದು ಬಂಗಾರದ ಹಂಸದ ರೂಪದಲ್ಲಿ ಜನ್ಮ ತಾಳಿದ್ದ. ಆದರೆ ಅವನು ತನ್ನ ಹಿಂದಿನ ಜೀವನವನ್ನು ಇದುವರೆಗೆ ಮರೆತಿರಲಿಲ್ಲ. ಅದು ಯಾವಾಗಲಾದರೂ ಒಂಟಿಯಾಗಿ ಕುಳಿತಿರುವಾಗ ನನ್ನ ಹೆಂಡತಿ ಮಕ್ಕಳ ಪರಿಸ್ಥಿತಿ ಏನಾಗಿರಬಹುದು? ಎಂದು ಯೋಚಿಸುತ್ತಿತ್ತು. ಒಂದು ದಿನ ಇದರಿಂದ ಆ ಹಂಸಕ್ಕೆ ವಿಪರೀತ ಚಿಂತೆಯಾಗುತ್ತಿತ್ತು. ಹಂಸವು ತಾನು ತನ್ನ ಮನೆಗೆ ಹೋಗಿ ತನ್ನ ಹೆಂಡತಿ ಮಕ್ಕಳ ಪರಿಸ್ಥಿತಿಯನ್ನು ಕಣ್ಣಾರೆ ಕಂಡು ಬರಬೇಕೆಂದು ನಿರ್ಧರಿಸಿತು. ಆ ಹಂಸವು ಹಾರುತ್ತಾ ತನ್ನ ಪೂರ್ವ ಜನ್ಮದ ಮನೆಗೆ ತಲುಪಿತು. ಹಳ್ಳಿಗರ ದಯೆಯಿಂದ ತನ್ನ ಮಕ್ಕಳು ಬೆಳೆಯುತ್ತಿರುವುದನ್ನು ಹಂಸವು ಕಂಡಿತು. ಅದರ ಪತ್ನಿಯ ಪರಿಸ್ಥಿತಿ ತುಂಬಾ ಹೀನಾಯವಾಗಿತ್ತು. ಹೆಂಡತಿ ಮಕ್ಕಳ ಬಟ್ಟೆಗಳು ಹರಿದುಹೋಗಿದ್ದವು. ಮುಖದ ಮೇಲೆ ಉದಾಸೀನತೆ ತುಂಬಿಕೊಂಡಿತ್ತು. ಬಡಪಾಯಿ ಹಂಸಕ್ಕೆ ಅವರ ಸ್ಥಿತಿಯನ್ನು ಕಂಡು ಮರುಕ ಉಂಟಾಗಿತ್ತು. ತಾನು ಇವರಿಗೋಸ್ಕರ ಏನಾದರೂ ಸಹಾಯ ಮಾಡಲೇಬೇಕೆಂದು ಪಂಡಿತನಾಗಿದ್ದ ಆ ಹಂಸ ನಿರ್ಣಯಿಸಿತು. ನಂತರ ಅದು ತನ್ನ ಮನೆಯೊಳಗೆ ಹೋಯಿತು. ಆಗ ಅದನ್ನು ನೋಡಿದ ಅವನ ಚಿಕ್ಕ ಮಗ ರಾಮು ಚಪ್ಪಾಳೆ ತಟ್ಟುತ್ತಾ “ಅಮ್ಮಾ... ಅಮ್ಮಾ.... ನೋಡಮ್ಮಾ... ನಮ್ಮ ಮನೆಗೆ ಚಿನ್ನದ ರೆಕ್ಕೆಯುಳ್ಳ ಹಂಸ ಬಂದಿದೆ” ಎಂದು ಕೂಗಿದ. ಆ ಹುಡುಗನ ಅಮ್ಮ ಅಡಿಗೆ ಮನೆಯಿಂದ ಹೊರ ಬಂದು ಆ ಬಂಗಾರದ ರೆಕ್ಕೆಯುಳ್ಳ ವಿಚಿತ್ರ ಹಂಸವನ್ನು ಆಶ್ಚರ್ಯದಿಂದ ನೋಡತೊಡಗಿದಳು. ಆಗ ಆ ಹಂಸವು “ನನ್ನನ್ನು ಈ ರೀತಿ ಕ್ರೂರವಾಗಿ ನೋಡಬೇಡ ಪ್ರಿಯೆ. ನಾನು ಹಿಂದಿನ ಜನ್ಮದಲ್ಲಿ ನಿನ್ನ ಪತಿಯಾಗಿದ್ದೆ. ಈ ಜನ್ಮದಲ್ಲಿ ನಾನು ಹಂಸದ ರೂಪವನ್ನು ತಾಳಿದ್ದೇನೆ” ಎಂದಿತು. ಆಗ ಅವಳು ಮತ್ತಷ್ಟು ಅಚ್ಚರಿಯಿಂದ “ಹಾಗಿದ್ದರೆ ನೀವು ನನ್ನ ಪತಿಯೇ ?” ಎಂದು ಕೇಳಿದಳು. ಆಗ ಆ ಹಂಸವು, “ಹೌದು ಪ್ರಿಯೆ. ಆದರೆ ನನಗೆ ನಿಮ್ಮೆಲ್ಲರ ಪರಿಸ್ಥಿತಿಯನ್ನು ನೋಡಲಾಗುತ್ತಿಲ್ಲಾ. ನಾನು ಸತ್ತುಹೋದ ಮೇಲೆ ನಿಮ್ಮೆಲ್ಲರ ಸ್ಥಿತಿ ಹದಗೆಟ್ಟಿದೆ. ಯಾರ ಮೈಮೇಲೂ ಒಳ್ಳೆಯ ಬಟ್ಟೆಗಳಿಲ್ಲಾ. ಎಲ್ಲರೂ ಒಣಗಿ ಮೂಳೆಗಳ ಗೂಡಾಗಿದ್ದೀರಾ” ಎಂದಿತು. ಆಗ ಪಂಡಿತನ ಪತ್ನಿಯು ಕಣ್ಣೀರು ಸುರಿಸುತ್ತಾ “ಏನು ಮಾಡೋಣ ಪ್ರಿಯ, ಈಗ ನಮ್ಮ ಸಂಸಾರವನ್ನು ಸುಖವಾಗಿ ನಡೆಸುವುದಕ್ಕೆ ನಮ್ಮ ಬಳಿ ಹಣವಿಲ್ಲಾ” ಎಂದು ನುಡಿದಳು. ಅವಳ ಕಣ್ಣೀರಿಗೆ ಹಂಸವು ದುಃಖದಿಂದ “ನೀನು ಅಳಬೇಡ ಪ್ರಿಯೆ. ನನ್ನಿಂದ ನಿನ್ನ ಕಣ್ಣೀರನ್ನು ನೋಡಲಾಗುವುದಿಲ್ಲಾ. ನೋಡು, ನನ್ನ ರೆಕ್ಕೆಗಳು ಚಿನ್ನದ್ದಾಗಿವೆ. ನೀನು ನನ್ನ ಒಂದು ರೆಕ್ಕೆಯನ್ನು ತೆಗೆದುಕೊಂಡು ಹೋಗಿ ಯಾರಿಗಾದರೂ ಮಾರಿ, ಬಂದ ಹಣದಿಂದ ಸುಖವಾಗಿ ಎಲ್ಲರೂ ಜೀವನ ನಡೆಸಿ” ಎಂದಿತು. ಪಂಡಿತನ ಪತ್ನಿ ಆ ಚಿನ್ನದ ರೆಕ್ಕೆಯನ್ನು ನೋಡಿ ಬಾಯಲ್ಲಿ ನೀರು ಸುರಿಸಿದಳು. ಚಿನ್ನದ ರೆಕ್ಕೆಯನ್ನು ಮಾರಿ, ಬಂದ ಹಣದಿಂದ ಸುಖವಾಗಿರಬಹುದು ಎಂದು ಅವಳು ಅಂದುಕೊಂಡಳು. ನಂತರ ಆ ಕೂಡಲೇ ಅವಳು ಒಂದು ಚಿನ್ನದ ರೆಕ್ಕೆಯನ್ನು ಹಿಡಿದುಕೊಂಡು ಪೇಟೆಗೆ ತೆಗೆದುಕೊಂಡು ಹೋಗಿ ಮಾರಿದಳು. ಅವಳಿಗೆ

sumashri.com

ಬಹಳಷ್ಟು ಹಣ ಕೈಗೆ ಬಂದಿತು. ಎಷ್ಟೋ ವರ್ಷಗಳ ನಂತರ ಅವಳು ಅಷ್ಟೊಂದು ಹಣವನ್ನು ಒಟ್ಟಿಗೆ ಕಂಡಿದ್ದಳು. ಒಂದೇ ದಿನದಲ್ಲಿಯೇ ಅವಳ ಮನೆಯ ಇಡೀ ವಾತಾವರಣ ಬದಲಾಗಿತ್ತು, ಮಾರನೇ ದಿನ ಆ ಬಂಗಾರದ ಹಂಸ ಪುನಃ ಅವಳ ಮನೆಗೆ ಬಂದು ತನ್ನ ಇನ್ನೊಂದು ಬಂಗಾರದ ರೆಕ್ಕೆಯನ್ನೂ ಅವಳಿಗೆ ಕೊಟ್ಟು ಹೋಯಿತು. ಈ ರೀತಿ ಆ ಹಂಸ ನಿರಂತರ ಅವಳ ಮನೆಗೆ ಚಿನ್ನದ ರೆಕ್ಕೆಯನ್ನು ಕೊಟ್ಟು ಹಿಂತಿರುಗಿ ಹೋಗುತ್ತಿತ್ತು. ಪಂಡಿತನ ಪತ್ನಿ ಆ ರೆಕ್ಕೆಯನ್ನು ಮಾರಿ ಹಣ ತರುತ್ತಿದ್ದಳು. ಅವರು ಕ್ರಮೇಣ ಬಹಳ ಶ್ರೀಮಂತರಾಗುತ್ತಾ ಬಂದರು. ಕೆಲವೇ ದಿನಗಳಲ್ಲಿ ಪಂಡಿತನ ಪತ್ನಿ ಹೊಸ ಮನೆಯನ್ನು ಕಟ್ಟಿಸಿದಳು. ಅವಳ ಮನೆಯಲ್ಲಿ ಈಗ ಎಲ್ಲಾ ರೀತಿಯ ಸುಖ ಸೌಲಭ್ಯಗಳು ಇದ್ದವು. ಈ ವಿಧವೆಯಾದ ಪಂಡಿತನ ಪತ್ನಿ ಅಷ್ಟೊಂದು ಶ್ರೀಮಂತಳಾದುದನ್ನು ಕಂಡ ಹಳ್ಳಿಯ ಜನರಿಗೆ ಅತ್ಯಂತ ಆಶ್ಚರ್ಯ ಉಂಟಾಗಿತ್ತು.

ದುರಾಸೆಯೆಂಬುದು ಈ ಪ್ರಪಂಚದಲ್ಲಿ ಪ್ರತಿಯೊಬ್ಬ ಮನುಷ್ಯನ ಜೊತೆ ನಾಲಿಗೆಯಂತೆ ಅಂಟಿಕೊಂಡಿರುತ್ತದೆ. ವಿಶೇಷವಾಗಿ ಯಾವಾಗ ಮನುಷ್ಯನ ಬಳಿ ಹಣ ಬಂದುಬಿಡುತ್ತದೆಯೋ. ಆಗ ಆತನ ಬುದ್ಧಿ ಭ್ರಷ್ಟವಾಗಿಬಿಡುತ್ತದೆ. ಅದೇ ರೀತಿ ಆ ವಿಧವೆಗೂ ಆಯಿತು. ಅವಳಲ್ಲಿ ತಾನೇಕೆ ಆ ಹಂಸದ ಎಲ್ಲಾ ಪುಕ್ಕಗಳನ್ನು ಒಟ್ಟಿಗೆ ಕಿತ್ತು ಒಂದೇ ದಿನ ಮಾರಿ ಅತ್ಯಂತ ಶ್ರೀಮಂತಳಾಗಿಬಿಡಬಾರದೆಂದು ಬುದ್ಧಿ ಉತ್ಪನ್ನವಾಯಿತು. ಹೌದು, ತಾನು ಹಾಗೇ ಮಾಡಬೇಕು. ಆ ಹಂಸಕ್ಕೂ ತನಗೂ ಏನು ತಾನೇ ಸಂಬಂಧವಿದೆ? ನನ್ನ ಪತಿ ಬಹಳ ಹಿಂದೆಯೇ ಸತ್ತು ಹೋಗಿದ್ದಾನೆ. ಇದು ಕೇವಲ ಈಗ ಹಂಸ ಅಷ್ಟೇ ಎಂದು ಅವಳು ನಿರ್ಧರಿಸಿದಳು. ಮಾರನೇ ದಿನ ಪುನಃ ಅವಳ ಮನೆಗೆ ಬಂದ ಹಂಸ ತನ್ನ ಪತ್ನಿಯ ಬಳಿಗೆ ಬಂದು, "ಪ್ರಿಯೆ, ತೆಗೆದುಕೊ ನನ್ನ ಒಂದು ಬಂಗಾರದ ಪುಕ್ಕವನ್ನು ಕಿತ್ತುಕೊ" ಎಂದಿತು. ಆಕೆಯ ಮನಸ್ಸಿನಲ್ಲಿ ಈ ಮೊದಲೇ ಪಾಪ ತುಂಬಿಕೊಂಡಿತ್ತು, ತಾನು ಹಂಸದ ರೆಕ್ಕೆಯ ಎಲ್ಲಾ ಪುಕ್ಕಗಳನ್ನು ತೆಗೆದುಕೊಳ್ಳಬೇಕೆಂದು ಅವಳು ರಾತ್ರಿಯೇ ನಿರ್ಧರಿಸಿದ್ದಳು. ಆದ್ದರಿಂದ ಅವಳು ತಕ್ಷಣವೇ ಹಂಸದ ಕುತ್ತಿಗೆಯನ್ನು ಹಿಡಿದುಕೊಂಡಳು. "ಇದೇನು ಮಾಡುತ್ತಿರುವೆ ಪ್ರಿಯೆ?" ಎಂದು ಹಂಸ ಕಿರುಚಿತು. ಆದರೆ ಆ ಹೆಂಗಸಿನೊಳಗೆ ದುರಾಸೆಯ ಭೂತ ಸವಾರಿಯಾಗಿತ್ತು. ಅವಳು ಲೋಭದಿಂದ ಕುರುಡಿಯಾಗಿದ್ದಳು. ಅವಳು, ಹಂಸದ ಮಾತಿಗೆ ಏನೂ ಉತ್ತರ ಕೊಡದೆ ಪುಕ್ಕಗಳನ್ನು ತೆಗೆದುಕೊಳ್ಳತೊಡಗಿದಳು. "ಪ್ರಿಯೆ, ನನ್ನ ರೆಕ್ಕೆಯ ಎಲ್ಲಾ ಪುಕ್ಕಗಳನ್ನು ತೆರೆದುಕೊಳ್ಳಬೇಡ. ಈ ಪುಕ್ಕಗಳಿಲ್ಲದೇ ಹೋದರೆ ನಾನು ಹಾರಲಾರೆ, ನನ್ನ ಮೇಲೆ ದಯೆ ತೋರು" ಎಂದು ಹಂಸ ಅಂಗಲಾಚಿತು. ಆಗ ಪಂಡಿತನ ಪತ್ನಿ "ನೀನು ಹಾರು ಅಥವಾ ಬಿಡು ಅದನ್ನು ಕಟ್ಟಿಕೊಂಡು ನಂಗೇನು ನಾನಂತೂ ಅತ್ಯಂತ ಶ್ರೀಮಂತಳಾಗಬೇಕು ಅಷ್ಟೆ ಹ.........ಹ..." ಎಂದು ನಗುತ್ತಾ ರೆಕ್ಕೆಯ ಪುಕ್ಕಗಳನ್ನು ತರೆಯತೊಡಗಿದಳು. ಬಡಪಾಯಿ ಹಂಸ ತಳಮಳಿಸುತ್ತಾ ನಿಂತಿತ್ತು. ಸ್ವಲ್ಪ ಹೊತ್ತಿಗೆಲ್ಲಾ ಹಂಸದ ಎಲ್ಲಾ ರೆಕ್ಕ ಪುಕ್ಕಗಳು ನೆಲದ ಮೇಲೆ ರಾಶಿಯಾಗಿ ಬಿದ್ದಿದ್ದವು. ಅದು ಬೋಳಾಗಿ ನಿಂತಿತ್ತು. ಆ ಹೆಂಗಸು ಶೀಘ್ರವೇ ಪುಕ್ಕಗಳನ್ನು ಒಟ್ಟುಗೂಡಿಸಿ, ಒಂದು ಬಟ್ಟೆಯಲ್ಲಿ ಕಟ್ಟತೊಡಗಿದಳು. ಆದರೆ ಇದ್ದಕ್ಕಿದ್ದಂತೆ ಎಲ್ಲಾ ಬಂಗಾರದ ಪುಕ್ಕಗಳು ಬಿಳಿಯ ಮಾಮೂಲಿ ಪುಕ್ಕಗಳಾಗಿದ್ದನ್ನು ಕಂಡ ಅವಳು ಅಚ್ಚರಿಯಿಂದ "ಅಯ್ಯೋ, ಇದೇನು ಹೀಗಾಯ್ತು? ಇವು ಚಿನ್ನದ್ದಲ್ಲಾ... ಅಯ್ಯೋ ನಾನು ನಾಶವಾದೆ" ಎಂದು ಹಣೆ

ಹಣೆ ಬಡಿಕೊಳ್ಳತೊಡಗಿದಳು. ಆದರೆ ಆದದ್ದು ಆಗಿಹೋಗಿತ್ತು, ದುರಾಸೆಯಿಂದ ಕುರುಡಿಯಾಗಿ ಆ ಹುಚ್ಚು ಹೆಂಗಸು ಚಿನ್ನದ ಎಲ್ಲಾ ಪುಕ್ಕಗಳನ್ನು ಸಾಧಾರಣ ಪುಕ್ಕಗಳನ್ನಾಗಿಸಿದ್ದಳು ಮತ್ತು ಜೊತೆಗೆ ತನ್ನ ಪತಿಯ ಪುನರ್ಜನ್ಮದ ಹಂಸವನ್ನು ರೆಕ್ಕೆಯಿಲ್ಲದಂತೆ ಮಾಡಿದ್ದಳು. ಆ ಬಡಪಾಯಿ ಹಂಸ ಈಗ ಹಾರಲಾರದ ಸ್ಥಿತಿಗೆ ಬಂದಿತ್ತು, ವಿಧವೆ ಹೆಂಗಸು ಅಳುತ್ತಾ "ಇದೆಲ್ಲಾ ಹೇಗಾಯ್ತು? ಚಿನ್ನದ ಪುಕ್ಕ ಸಾಧಾರಣ ಪುಕ್ಕ ಯಾವ ರೀತಿ ಆಯ್ತು?" ಎಂದು ಕೇಳಿದಳು. ಆಗ ಹಂಸವು "ಪ್ರಿಯೆ, ಇದೆಲ್ಲಾ ಕರ್ಮಗಳ ಫಲ. ನಾನು ನನ್ನ ಇಚ್ಛೆಯಿಂದ ಕೊಟ್ಟರೆ ಮಾತ್ರ ಅದು ಚಿನ್ನದ ಪುಕ್ಕವಾಗಿರಲು ಸಾಧ್ಯ. ಹಾಗಿಲ್ಲದೆ ನನ್ನ ಇಚ್ಛೆಗೆ ವಿರುದ್ಧವಾಗಿ ಯಾರಾದರೂ ಕಿತ್ತುಕೊಂಡರೆ ಅವು ಸಾಧಾರಣ ಪುಕ್ಕವಾಗಿಬಿಡುತ್ತವೆ. ಈಗ ಕೇವಲ ನೀನು ಮಾತ್ರ ನಾಶವಾಗಲಿಲ್ಲ ನಾನೂ ಸಹ ಹಾಳಾಗಿಹೋದೆ. ನೋಡು, ಈಗ ನಾನು ರೆಕ್ಕೆಗಳಿಲ್ಲದೆ ಎಲ್ಲಿಗೂ ಹೋಗುವುದಕ್ಕೆ ಸಾಧ್ಯವಿಲ್ಲಾ" ಎಂದು ಹೇಳಿ ವಿವಶತೆಯಿಂದ ಅಲ್ಲಿಯೇ ಒಂದು ಮೂಲೆಯಲ್ಲಿ ಬಿದ್ದುಕೊಂಡಿತು. ಈ ಆರು ತಿಂಗಳ ನಂತರ ಹಂಸಕ್ಕೆ ಪುನಃ ರೆಕ್ಕೆಗಳು ಬೆಳೆದವು. ಆದರೆ, ಆ ರೆಕ್ಕೆಗಳು ಚಿನ್ನದ್ದಾಗಿರದೆ ಸಾಧಾರಣ ರೆಕ್ಕೆಗಳಾಗಿದ್ದವು. ನಂತರ ಹಂಸ ಅಲ್ಲಿಂದ ಹಾರುತ್ತಾ ಯಾವುದೋ ನದಿಯ ತೀರಕ್ಕೆ ಹೋಗಿ ಅಲ್ಲಿದ್ದ ಮರವೊಂದರ ಮೇಲೆ ವಾಸಿಸತೊಡಗಿತು. ದುರಾಸೆಯ ಹೆಣ್ಣಿನ ಹಣ ಸ್ವಲ್ಪ ದಿನಗಳಲ್ಲೇ ಮುಗಿದುಹೋಯಿತು. ಅವಳು ತನ್ನ ಮಕ್ಕಳೊಂದಿಗೆ ಯಥಾಪ್ರಕಾರ ಬಡತನದ ಜೀವನ ಸಾಗಿಸತೊಡಗಿದ್ದಳು.

## ಸುಭಾಷಿತ

**ಅನ್ನದಾನಂ ಪರಂ ದಾನಂ ವಿದ್ಯಾದಾನಮತಃ ಪರಮ್।**

**ಅನ್ನೇನ ಕ್ಷಣಿಕಾ ತೃಪ್ತಿಃ ಯಾವಜ್ಜೀವಂ ಚ ವಿದ್ಯಯಾ ।।**

ಅರ್ಥ – ಅನ್ನದಾನವು ಶ್ರೇಷ್ಠವಾದ ದಾನ, ವಿದ್ಯಾದಾನವು ಅನ್ನದಾನಕ್ಕಿಂತ ಅತ್ಯಂತ ಶ್ರೇಷ್ಠವಾದ ದಾನ. ಏಕೆಂದರೆ, ಅನ್ನವನ್ನು ನೀಡಿದರೆ ಕ್ಷಣಕಾಲದ ಹಸಿವು ನೀಗುತ್ತದೆ, ಆದರೆ ವಿದ್ಯೆಯನ್ನು ನೀಡಿದರೆ ಜೀವನ ಪರ್ಯಂತ ತೃಪ್ತಿ ಸಿಗುತ್ತದೆ.

sumashri.com

## ಉತ್ತರಗಳು

1. ಯಮನ ಸಹೋದರಿಯ ಹೆಸರು ಯಮೀ.
2. ಮಹಾವಿಷ್ಣುವಿನ ಚಕ್ರದ ಹೆಸರು ಸುದರ್ಶನ.
3. ಎರಡು ವಿಧವಾದ ಪಕ್ಷಗಳು ಕೃಷ್ಣಪಕ್ಷ ಮತ್ತು ಶುಕ್ಲಪಕ್ಷ.
4. ಚಂದ್ರನಿಗೆ ಪ್ರಿಯವಾದ ಸಮಿಧೆ ಪಲಾಶ.
5. ವಸಂತ ಋತುವು ಚೈತ್ರ ಮತ್ತು ವೈಶಾಖ ಮಾಸಗಳನ್ನು ಒಳಗೊಂಡಿದೆ.
6. ಜ್ಯೋತಿಷ್ಯ ಶಾಸ್ತ್ರದ ಪ್ರಕಾರ ನಕ್ಷತ್ರಗಳ ಸಂಖ್ಯೆ ಇಪ್ಪತ್ತೇಳು.
7. ಸತ್ಯಹರಿಶ್ಚಂದ್ರನ ಮಗನ ಹೆಸರು ರೋಹಿತಾಶ್ವ.
8. ಅಷ್ಟಾಂಗಯೋಗದ ಕೊನೆಯ ಹಂತ ಸಮಾಧಿ.
9. ನವರಾತ್ರಿ ಆಶ್ವಯುಜ ಮಾಸದಲ್ಲಿ ಬರುತ್ತದೆ.
10. ಪಂಚಲೋಹಗಳು ಸ್ವರ್ಣ, ರಜತ, ತಾಮ್ರ, ಸೀಸ ಮತ್ತು ಕಬ್ಬಿಣ.

## ರಸಪ್ರಶ್ನೆಗಳು

1. ಕುಲಪರ್ವತಗಳು ಎಷ್ಟು?
2. ಪುಷ್ಪಬಾಣ ಯಾರ ಹೆಸರು?
3. ಕುಂಭದಿಂದ ಜನಿಸಿದ ಋಷಿ ಯಾರು?
4. ಸರಸ್ವತಿಯ ವೀಣೆಯ ಹೆಸರೇನು?
5. ಇಂದ್ರನ ಆಯುಧದ ಹೆಸರೇನು?
6. ಹಿಂದುಗಳ ಪವಿತ್ರ ನದೀ ಯಾವುದು?
7. ಕಾಕುತ್ಸ್ಥ ಎಂದು ಪ್ರಸಿದ್ಧನಾದವನು ಯಾರು?
8. ಸೂರ್ಯನ ಸಾರಥಿ ಯಾರು?
9. ಹಲಾಯುಧ ಎಂದರೆ ಯಾರು?
10. ಪಂಚವಾದ್ಯಗಳು ಯಾವುವು?

sumashri.com

# <u>ಶಾಂತಿಮಂತ್ರ</u>

**ಸರ್ವೇ ಭವಂತು ಸುಖಿನಃ ಸರ್ವೇ ಸಂತು ನಿರಾಮಯಾಃ|**

**ಸರ್ವೇ ಭದ್ರಾಣಿ ಪಶ್ಯಂತು ಮಾ ಕಶ್ಚಿತ್ ದುಃಖಭಾಗ್ ಭವೇತ್||**

ಅರ್ಥ – ಲೋಕದಲ್ಲಿ ಎಲ್ಲರೂ ಸುಖವಾಗಿರಲಿ. ಎಲ್ಲರೂ ರೋಗಗಳಿಂದ ಮುಕ್ತರಾಗಿ, ಆರೋಗ್ಯವಂತರಾಗಿರಲಿ. ಎಲ್ಲರೂ ಒಳ್ಳೆಯದನ್ನೇ ಮಾಡಲಿ ಮತ್ತು ಯಾರೂ ಕೂಡಾ ದುಃಖವನ್ನು ಅನುಭವಿಸದಿರಲಿ.

| ಓಂ ತತ್ ಸತ್ |

**************

ಹೆಚ್ಚಿನ ವಿವರಗಳಿಗಾಗಿ sumashri.com ಗೆ ಭೇಟಿ ನೀಡಿ.

sumashri.com

